# ಮತ್ತೊಮ್ಮೆ ರಾಬರ್ಟ್ ಜೋಡಿ



‘ರಾಬರ್ಟ್’ ಸಿನಿಮಾದಲ್ಲಿ ರಾಘವ್ ಮತ್ತು ತನು ಪಾತ್ರಗಳ ಮೂಲಕ ಪ್ರೇಕ್ಷಕರ ಮೆಚ್ಚುಗೆ ಪಡೆದಿದ್ದ ವಿನೋದ್ ಪ್ರಭಾಕರ್ ಮತ್ತು ಸೋನಲ್ ಮೊಂತೆರೊ ಜೋಡಿ ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದೆ. ಇವರಿಬ್ಬರು ಜೋಡಿಯಾಗಿ ‘ಮಾದೇವ’ ಸಿನಿಮಾದಲ್ಲಿ ಮಗದೊಮ್ಮೆ ಕಾಣಿಸಿಕೊಳ್ಳುತ್ತಿದ್ದಾರೆ.

‘ಮಾದೇವ’ ಸಿನಿಮಾ ಚಿತ್ರೀಕರಣ ಪೂರ್ಣಗೊಂಡಿದ್ದು, ‘ಖಾಕಿ’ ಸಿನಿಮಾ ಖ್ಯಾತಿಯ ನವೀನ್ ರೆಡ್ಡಿ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆಯುತ್ತಿದೆ. ಕನಕಪುರ, ಚನ್ನಪಟ್ಟಣ, ಶಿವಮೊಗ್ಗ, ಹೈದರಾಬಾದಿನ ರಾಮೋಜಿ ಫಿಲಂ ಸಿಟಿ, ಹೀಗೆ ಹಲವು ಪ್ರದೇಶಗಳಲ್ಲಿ ಸಿನಿಮಾ ಚಿತ್ರೀಕರಣ ನಡೆಸಲಾಗಿದೆ.

ನೈಜ ಘಟನೆಗಳಿಂದ ಸ್ಫೂರ್ತಿ ಪಡೆದ ಈ ಸಿನಿಮಾದ ಕಥೆ 1965, 1980 ಮತ್ತು 1999ರ ಕಾಲಘಟ್ಟದ್ದಾಗಿದೆ. ಹಿಂದೆಂದೂ ಕಂಡಿರದಂತಹ ಲುಕ್‌ನಲ್ಲಿ ವಿನೋದ್ ಪ್ರಭಾಕರ್ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ. ಖಳನಾಯಕನಾಗಿ ಶ್ರೀನಗರ ಕಿಟ್ಟಿ ನಟಿಸಿದ್ದು, ಶ್ರುತಿ ಮತ್ತು ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ ಪ್ರಮುಖ ಪಾತ್ರಗಳಲ್ಲಿದ್ದಾರೆ. ವಿನೋದ್ ಪ್ರಭಾಕರ್ ನಟನೆಯ ‘ಫೈಟರ್’ ಸಿನಿಮಾ ಕೂಡ ಕೆಲವೇ ದಿನಗಳಲ್ಲಿ ಬಿಡುಗಡೆಗೊಳ್ಳಲಿದೆ.





# ಅಪಘಾತದ ಅನುಭವ ಹಂಚಿಕೊಂಡ ಅನುಷಾ ರೈ

ಕಿರುತೆರೆ ಮೂಲಕ ನಟನೆಗಿಳಿದು, ಹಲವು ಸಿನಿಮಾಗಳಲ್ಲಿ ನಟಿಸಿರುವ ನಟಿ ಅನುಷಾ ರೈ, ಈಚೆಗೆ ಅಪಘಾತಕ್ಕೀಡಾಗಿದ್ದರು. ಬೆಂಗಳೂರಿನಲ್ಲಿ ಸಣ್ಣ ಅಪಘಾತದಲ್ಲಿ ಗಾಯಗೊಂಡಿದ್ದ ಅವರು, ತಮಗಾದ ಅನುಭವಗಳನ್ನು ಸಂದರ್ಶನವೊಂದರಲ್ಲಿ ಹಂಚಿಕೊಂಡಿದ್ದಾರೆ.

‘ನಾನು ಆರ್‌ಆರ್ ನಗರದಲ್ಲಿ ಡಾನ್ಸ್ ಕ್ಲಾಸ್ ಬಳಿ ನನ್ನ ವಾಹನ ಪಾರ್ಕ್ ಮಾಡುತ್ತಿದ್ದೆ. ಇದ್ದಕ್ಕಿದ್ದಂತೆ ಕಾರೊಂದು ಹಿಂದಿನಿಂದ ಡಿಕ್ಕಿ ಹೊಡೆಯಿತು. ನನಗೆ ಏನಾಯಿತೆಂದೇ ತಿಳಿಯಲಿಲ್ಲ, ಚಕ್ರದಡಿಯಲ್ಲಿದ್ದೆ. ಆ ವಾಹನ ಓಡಿಸುತ್ತಿದ್ದ ವ್ಯಕ್ತಿ ಅಪ್ರಾಪ್ತ. ಗಾಬರಿಯಾಗಿ ತಕ್ಷಣವೇ ಆಕ್ಸಲರೇಟರ್ ಒತ್ತಿದ್ದ. ಗಾಯಗೊಂಡಿದ್ದ ನನ್ನನ್ನು ತಕ್ಷಣವೇ ಆಸ್ಪತ್ರೆಗೆ ಸೇರಿಸಿದ್ದರು. ಪುಣ್ಯಕ್ಕೆ ನನಗೆ ಯಾವುದೇ ಫ್ರ್ಯಾಕ್ಚರ್ ಆಗಿರಲಿಲ್ಲ. ದೇಹದ ಕೆಲವು ಕಡೆ ಗಾಯಗಳಾಗಿದ್ದವು’ ಎಂದು ಹೇಳಿಕೊಂಡಿದ್ದಾರೆ.

‘ಕೂದಲೆಳೆ ಅಂತರದಲ್ಲಿ ಸಾವಿನಿಂದ ಪಾರಾದೆ ಎನಿಸುತ್ತಿದೆ. ಇದೇ ನನ್ನ ಅದೃಷ್ಟ’ ಎಂದು ಘಟನೆಯನ್ನು ಮೆಲುಕು ಹಾಕಿದ್ದಾರೆ.

‘ಮಹಾನುಭಾವರು’ ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟ ಅನುಷಾ ರೈ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ಖಡಕ್, ಬಿಎಂಡಬ್ಲ್ಯು, ರೈಡರ್, ದಮಯಂತಿ, ಪೆಂಟಗನ್ ಮುಂತಾದ ಸಿನಿಮಾಗಳಲ್ಲಿ ಮಿಂಚಿದ್ದಾರೆ. ಸಿನಿಮಾವೊಂದರ ಶೂಟಿಂಗ್‌ಗಾಗಿ ಊಟಿಗೆ ತೆರಳಬೇಕಿದ್ದ ಅವರು ಅಪಘಾತದ ಕಾರಣದಿಂದ ವಿರಾಮ ತೆಗೆದುಕೊಂಡಿದ್ದಾರೆ. ಸದ್ಯ ಚೇತರಿಸಿಕೊಳ್ಳುತ್ತಿದ್ದು, ಮತ್ತೆ ನಟನೆಗೆ ತೆರಳುವ ತಯಾರಿ ನಡೆಸಿದ್ದಾರೆ.